ಒ ಎಸ್ 117/2020 ಪಿ.ಡಬ್ಲ್ಯೂ 1

ಇಂದು ದಿಃ 09.04.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿ ಪರ ಮಾನ್ಯ ಎ ಜಿ ಪಿ ಯವರಿಂದಃ

ನಾನು ದಾವೆಯ ಮೊದಲನೆ ವಾದಿ. ನಾನು ನನ್ನ ಸ್ವಂತಕ್ಕೆ ಮತ್ತು ಇತರರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನಾನು ಬಿ ಎಸ್ ಸಿ ಪದವೀಧರ. ದಾವೆಯ ಎಲ್ಲಾ ವಿವರಗಳನ್ನು ನಾನು ಈವರೆಗೆ ಓದಿದ್ದೇನೆ. 3 ನೇ ಪ್ರತಿವಾದಿಯ ಆದೇಶದ ವಿರುದ್ಧ ನಾನು 4 ನೇ ಪ್ರತಿವಾದಿಗೆ ಮೇಲ್ಮನವಿ ಸಲ್ಲಿಸಿದ್ದೆ. ನಾನು 3 ನೇ ಪ್ರತಿವಾದಿಯ ಆದೇಶದ ಮೇಲೆ 4 ನೇ ಪ್ರತಿವಾದಿಗೆ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆ ಮೇಲ್ಮನವಿಯ ಅರ್ಜಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. 3 ನೇ ಪ್ರತಿವಾದಿಯು ಆರ್ ಟಿ ಸಿ ಯನ್ನು ಪೂರ್ಣ ಪ್ರಮಾಣದ ಕಾನೂನು ತನಿಖೆ ಮಾಡಿ ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಗಳ ವಿರುದ್ಧ ನಾನು ದಾವೆಯ 9 ನೆ ಖಂಡಿಕೆಯಲ್ಲಿ ನಿರಾಧಾರ ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವೆ ಸಲ್ಲಿಸುವ ಪೂರ್ವದಲ್ಲಿ ಕಲಂ 80 ರ ಮೇಲೆ 3 ಮತ್ತು 4 ನೇ ಪ್ರತಿವಾದಿಗಳಿಗೆ ವಕೀಲರ ಮೂಲಕ ನೋಟಿಸು ಕಳುಹಿಸಿದ್ದೆನಾ ಎಂದರೆ ಕೊಟ್ಟಿಲ್ಲ. ಆ ರೀತಿ ನೋಟಿಸು ಕೊಟ್ಟು ಆ ನಂತರ ದಾವೆ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಮೂಲದಾವೆಯಲ್ಲಿ 3 ಮತ್ತು 4 ನೇ ಪ್ರತಿವಾದಿಗಳ ವಿರುದ್ಧ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.